**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 710 |
| 2 | ಸದಸ್ಯರ ಹೆಸರು | : | ಶ್ರೀ ಎಂ.ನಾರಾಯಣಸ್ವಾಮಿ |
| 3 | ಉತ್ತರಿಸುವ ದಿನಾಂಕ | : | 12-03-2020 |
| 4 | ಉತ್ತರಿಸುವವರು | : | ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದಲ್ಲಿನ ವಾರ್ಡ್-56ರಲ್ಲಿ ಇರುವ ಬೆನ್ನಿಗಾನಹಳ್ಳಿ ಕೆರೆ ಕಲುಷಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಿಯೇ; | 2016-17ನೇ ಸಾಲಿನ ರಾಜ್ಯ ಸರ್ಕಾರದ ನಗರೋತ್ಥಾನ ಅನುದಾನದಡಿಯಲ್ಲಿ ಬೆನ್ನಿಗಾನಹಳ್ಳಿ ಕೆರೆಯಲ್ಲಿ ಕ್ರೋಢೀಕೃತವಾಗಿದ್ದ ಹೂಳನ್ನು ತೆಗೆದು ಹಾಗೂ ಕೊಳಚೆ ನೀರು ಸೇರದಂತೆ ಕೊಳಚೆ ನೀರಿನ ತಿರುವುಗಾಲುವೆಯನ್ನು ನಿರ್ಮಿಸಿ ಭಾಗಶಃ ಅಭಿವೃದ್ಧಿ ಕಾಮಗಾರಿಯನ್ನು 2018-19ನೇ ಸಾಲಿನಲ್ಲಿ ಪೂರ್ಣಗೊಳಿಸಿದ್ದು, ಹಾಲಿ ಮಳೆ ನೀರನ್ನು ಸಂಗ್ರಹಿಸಲಾಗಿದೆ. ಪ್ರಸ್ತುತ ಕೆರೆ ಕಲುಷಿತವಾಗಿರುವುದಿಲ್ಲ. |
| ಆ) | ಬೆನ್ನಿಗಾನಹಳ್ಳಿ ಕೆರೆಯನ್ನು ಹತ್ತು ತಿಂಗಳ ಹಿಂದೆ ಅಭಿವೃದ್ಧಿಪಡಿಸಿ ಸರಿಯಾದ ಸಮರ್ಪಕ ನಿರ್ವಹಣೆ ಮಾಡದೆ ಸರ್ಕಾರದ ಹಣವನ್ನು ಪೋಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಭಾಗಶಃ ಅಭಿವೃದ್ಧಿಗೊಂಡಿರುವ ಬೆನ್ನಿಗಾನಹಳ್ಳಿ ಕೆರೆಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲಾಗುತ್ತಿದ್ದು, ಕೆ.ಟಿ.ಪಿ.ಪಿ ನಿಯಮಾವಳಿಯಂತೆ ಟೆಂಡರ್ ಕರೆದು, ವಾರ್ಷಿಕ ರೂ.7.00 ಲಕ್ಷಗಳ ವೆಚ್ಚದಲ್ಲಿ ನಿರ್ವಹಣೆ ಮಾಡಲು ಗುತ್ತಿಗೆದಾರರಿಗೆ ವಹಿಸಿದ್ದು, ಸಮರ್ಪಕವಾಗಿ ನಿರ್ವಹಣೆ ಮಾಡಲಾಗಿರುತ್ತದೆ. |
| ಇ) | ಬೆನ್ನಿಗಾನಹಳ್ಳಿ ಕೆರೆ ಮತ್ತೆ ಅವಸಾನದ ಹಾದಿ ಹಿಡಿದಿದ್ದು, ಸದರಿ ಕೆರೆಯು ಮಳೆಬಂದಾಗ ಕೆರೆಯ ದಡದ ಮೇಲಿನ ಮಣ್ಣು ಕೆರೆಗೆ ಸೇರುತ್ತಿದ್ದು, ಕೆರೆಯ ಬದಿಯಲ್ಲಿರುವ ಕಲ್ಲು ಬೆಂಚುಗಳು ಮುರಿದು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆನ್ನಿಗಾನಹಳ್ಳಿ ಕೆರೆಯ ಉಳಿಕೆ ಅಭಿವೃದ್ಧಿ ಹಾಗೂ ಸುಧಾರಣಾ ಕಾಮಗಾರಿಯನ್ನು ಕೈಗೊಳ್ಳಲು 2019-20ನೇ ಸಾಲಿನಲ್ಲಿ ಬಿ.ಬಿ.ಎಂ.ಪಿ ಅನುದಾನದಲ್ಲಿ ರೂ.2.00 ಕೋಟಿಗಳ ಅಂದಾಜು ಸಿದ್ದಪಡಿಸಿ ಟೆಂಡರ್ ಆಹ್ವಾನಿಸಲಾಗಿತ್ತು. ಸದರಿ ಅಂದಾಜಿನಲ್ಲಿ ಪಾದಚಾರಿ ಮಾರ್ಗದ ಅಭಿವೃದ್ಧಿ, ಮಣ್ಣು ಹಾಸು ಕೆರೆಗೆ ಸೇರದಂತೆ ಕರ್ಬ್ ಸ್ಟೋನ್‌ಗಳನ್ನು ಅಳವಡಿಸುವುದು, ಇಳಿಜಾರಿಗೆ ಹುಲ್ಲು ಹಾಸು ಒದಗಿಸುವುದು, ಸಾರ್ವಜನಿಕ ಉಪಯೋಗಕ್ಕಾಗಿ ಬೆಂಚ್‌ಗಳನ್ನು ಅಳವಡಿಸುವ ಕಾಮಗಾರಿಗಳನ್ನು ಅಂದಾಜು ಪಟ್ಟಿಯಲ್ಲಿ ಸೇರಿಸಿಕೊಳ್ಳಲಾಗಿತ್ತು. ಆದರೆ, ಸದರಿ ಕೆರೆಯ ಮುಖ್ಯ ಏರಿಯ ಭಾಗದಲ್ಲಿ 4175 ಚದರ ಮೀ ಕೆರೆ ಪ್ರದೇಶವನ್ನು ಸರ್ವಿಸ್ ರಸ್ತೆ ನಿರ್ಮಿಸಲು ಬಿ.ಎಂ.ಆರ್.ಸಿ.ಎಲ್ ರವರು ಯೋಜಿಸಿದ್ದು, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ರವರು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಿರುವುದರಿಂದ ಟೆಂಡರ್‌ನಲ್ಲಿನ ಅಂಶಗಳನ್ನು ಬಿ.ಎಂ.ಆರ್.ಸಿ.ಎಲ್ ವತಿಯಿಂದ ಕೈಗೊಳ್ಳಲು ಷರತ್ತು ವಿಧಿಸಿ ಹಸ್ತಾಂತರಿಸಿರುವುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಆಹ್ವಾನಿಸಲಾಗಿದ್ದ ಟೆಂಡರ್‌ನ್ನು ರದ್ದುಪಡಿಸಲಾಗಿದೆ. ಬಹಳ ಹಿಂದೆ ಅಳವಡಿಸಲಾಗಿದ್ದ, ಪ್ರಸ್ತುತ ಮುರಿದು ಹಾಳಾಗಿದ್ದ ಕಲ್ಲು ಬೆಂಚ್‌ಗಳನ್ನು ತೆರವುಗೊಳಿಸಲಾಗಿದೆ. |

...2/-

| | | |
|---|---|---|
| ಈ) | ಬಂದಿದ್ದಲ್ಲಿ, ಸದರಿ ಕೆರೆಯನ್ನು ಸಮರ್ಪಕವಾಗಿ ಅಭಿವೃದ್ಧಿಪಡಿಸಲು ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿಯನ್ನು ನೀಡುವುದು) | ಬಿ.ಎಂ.ಆರ್.ಸಿ.ಎಲ್ ವತಿಯಿಂದ 4175 ಚದರ ಮೀಟರ್ ಬೆನ್ನಿಗಾನಹಳ್ಳಿ ಕೆರೆಯ ಮುಖ್ಯ ಏರಿ ಪ್ರದೇಶದಲ್ಲಿ ಸರ್ವಿಸ್ ರಸ್ತೆಯ ನಿರ್ಮಾಣಕ್ಕಾಗಿ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವು ಬಿ.ಎಂ.ಆರ್.ಸಿ.ಎಲ್ ಮನವಿಯನ್ನು ಪರಿಗಣಿಸಿ 4175 ಚ.ಮೀ ಬೆನ್ನಿಗಾನಹಳ್ಳಿ ಕೆರೆಯ ಮುಖ್ಯ ಏರಿಯ ಪ್ರದೇಶವನ್ನು ಹಸ್ತಾಂತರಿಸಲು ನಿರಾಕ್ಷೇಪಣಾ ಪತ್ರ ನೀಡಿರುತ್ತದೆ.<br><br>ಮೇಲಿನ ನಿರಾಕ್ಷೇಪಣಾ ಪತ್ರದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 4175 ಚ.ಮೀ ಕೆರೆ ಪ್ರದೇಶವನ್ನು ಬಿ.ಎಂ.ಆರ್.ಸಿ.ಎಲ್.ಗೆ ಹಸ್ತಾಂತರಿಸಿ ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ ಕೆರೆಯ ಉಳಿಕೆ ಅಭಿವೃದ್ಧಿ ಹಾಗೂ ಪುನಶ್ಚೇತನ ಕಾಮಗಾರಿಗಳನ್ನು ಕೈಗೊಂಡು ಪಾಲಿಕೆಗೆ ಕೆರೆಯನ್ನು ಹಸ್ತಾಂತರಿಸುವಂತೆ ಷರತ್ತು ವಿಧಿಸಿ ಅನುಮತಿ ಪತ್ರವನ್ನು ನೀಡಲಾಗಿದೆ. ಆದುದರಿಂದ, ಬೆನ್ನಿಗಾನಹಳ್ಳಿ ಕೆರೆಯ ಉಳಿಕೆ ಅಭಿವೃದ್ಧಿಗಾಗಿ ಆಹ್ವಾನಿಸಿದ್ದ ರೂ.2.00 ಕೋಟಿಗಳ ಟೆಂಡರ್‌ನ್ನು ರದ್ದುಪಡಿಸಲಾಗಿದೆ. |

**ಸಂಖ್ಯೆ: ನಅಇ 40 ಎಂಎನ್‌ವೈ 2020**

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ